ಸೆಪ್ಟೆಂಬರ್–2011 ರಲ್ಲಿ ಶಿಫಾರಸ್ಸು ಮಾಡಿದ್ದು, ಪರಿಶೀಲನೆಯಲ್ಲಿದೆ.

ಇ) ಅನುದಾನವನ್ನು ನಿಗಧಿಪಡಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪರಿಶೀಲನೆಯಲ್ಲಿದೆ.

ಪಶುಸಂಗೋಪನಾ ಕೇಂದ್ರ

286 (715) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾವತಿ ತಾಲ್ಲೂಕಿನಲ್ಲಿ ಹೊಸದಾಗಿ ಪಶು ಸಂಗೋಪನಾ ಕೇಂದ್ರವನ್ನು ನಿರ್ಮಿಸುವ ಮತ್ತು ಪಶು ಸಂಗೋಪನಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

ಆ) ಭದ್ರಾವತಿ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರರು ವಾಸಿಸುತಿದ್ದು, ಇವರುಗಳು ಮೂಲ ಸೌಲಭ್ಯದಿಂದ ವಂಚಿತರಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತುರ್ತಾಗಿ ಇವರುಗಳಿಗೆ ಮನೆ ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಅ) ಭದ್ರಾವತಿ ತಾಲ್ಲೂಕಿನಲ್ಲಿ ಹೊಸದಾಗಿ ಯಾವುದೇ ಪಶುವೈದ್ಯಕೀಯ ಚಿಕಿತ್ಸಾಲಯ/ ಆಸ್ಪತ್ರೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

2007ನೇ ಜಾನುವಾರು ಗಣತಿಯಂತೆ ಭದ್ರಾವತಿ ತಾಲ್ಲೂಕಿನಲ್ಲಿ ಒಟ್ಟು 96, 113 ಜಾನುವಾರು ಘಟಕಗಳಿವೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ

ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದರಂತೆ ಪಶುವೈದ್ಯ ಪದವೀಧರರಿರುವ ಪಶುವೈದ್ಯ ಸಂಸ್ಥೆ ಇರಬೇಕಾಗುತ್ತದೆ. ಅದರಂತೆ ಭದ್ರಾವತಿ ತಾಲ್ಲೂಕಿನಲ್ಲಿ ಜಾನುವಾರು ಘಟಕಗಳಿಗನುಗುಣವಾಗಿ ಒಟ್ಟು 19 ಪಶುವೈದ್ಯ ಸಂಸ್ಥೆಗಳು ಇರಬೇಕಾಗುತ್ತದೆ. ಆದರೆ, ಪ್ರಸ್ತುತ 21 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವಶ್ಯಕತೆಗಿಂತಲೂ 2 ಸಂಸ್ಥೆಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಅಲ್ಲದೆ, ರಾಜ್ಯದಲ್ಲಿ ಒಟ್ಟು 637 ಪಶುವೈದ್ಯ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಪಶುವೈದ್ಯ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿರುವುದಿಲ್ಲ.

ಆ) ಭದ್ರಾವತಿ ತಾಲ್ಲೂಕಿನಲ್ಲಿ ಆರ್ಥಿಕವಾಗಿ ಹಿಂದುಳಿದ 1460 ಮೀನುಗಾರರ ಕುಟುಂಬಗಳಿರುವುದಾಗಿ ಅಂದಾಜಿಸಲಾಗಿದ್ದು, ಅವುಗಳಲ್ಲಿ 598 ನಿರ್ವಸಿತ ಮೀನುಗಾರರೆಂದು ಗುರುತಿಸಲಾಗಿರುತ್ತದೆ.

ಸದರಿ ಮೀನುಗಾರರಿಗೆ ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನ ಹಾಗೂ ಯೋಜನೆಗಳ ಪ್ರಕಾರ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕಳೆದ 5 ವರ್ಷಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಾನ್ಯ ವಿಧಾನ ಸಭೆ ಸದಸ್ಯರು, ಶ್ರೀ ಸಂಗಮೇಶ್ವರ ಜಿ.ಪಿ. (ಭದ್ರಾವತಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 715ಕ್ಕೆ

ಅನುಬಂಧ

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಮೀನುಗಾರರ ಕುಟುಂಬಗಳಿಗೆ ಕಳೆದ 5 ವರ್ಷಗಳಲ್ಲಿಮೀನುಗಾರಿಕೆ ಇಲಾಖೆಯಿಂದ ನೀಡಿರುವ ಸೌಲಭ್ಯಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ	ವರ್ಷವಾರು ವರದಿ									
		2007-08		2008-09		2009-10		2010-11		2011-12	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಮತ್ಸ್ಯಾಶ್ರಯ ಯೋಜನೆ	8.00	20	12.00	30	1.60	4	4.00	10	–	10
2	ದಾವಿ-ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	0.04	74	0.05	84	0.05	90	0.05	91	0.05	98
3	ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯ	0.23	8	0.25	8	0.27	9	0.23	9	0.25	9
4	ಸಿಹಿನೀರು ಸಿಗಡಿ ಕೃಷಿಗೆ ಸಹಾಯ	–	–	–	–	0.20	1	0.20	1	0.20	1
5	ಮೀನುಗಾರಿಕೆ ಸಾಮಗ್ರಿ ಖರೀದಿಸಲು ಸಹಾಯ	0.04	4	0.10	10	0.10	10	0.08	8	0.10	10
6	ಮೀನುಮಾರಾಟ ಸಲಕರಣೆ ಖರೀದಿಸಲು ಸಹಾಯ	0.18	14	0.34	27	0.50	25	0.40	20	0.50	25
7	ಮತ್ಸ್ಯಾಹಾರಿ ಮೊಪೆಡ್ ಖರೀದಿಗೆ ನೆರವು	–	–	0.21	3	0.21	3	0.25	3	0.26	4
8	ತಾ.ಪಂ. ವಿಶೇಷ ಘಟಕ ಯೋಜನೆ	0.54	18	1.38	46	2.10	70	1.58	48	0.80	16
9	ತಾ.ಪಂ. ಗಿರಿಜನ ಉಪಯೋಜನೆ	–	–	0.12	4	0.06	2	0.05	1	0.30	6
10	ಮೀನುಮರಿ ಖರೀದಿಗೆ ಸಹಾಯ	–	–	–	–	0.15	7	0.83	19	–	–
11	ರಾಜ್ಯ ವಲಯ ವಿಶೇಷ ಘಟಕ ಯೋಜನೆ	–	–	–	–	0.20	4	0.55	11	0.65	13
12	ರಾಜ್ಯ ವಲಯ ಗಿರಿಜನ ಉಪಯೋಜನೆ	–	–	–	–	0.10	2	0.25	5	0.35	7
13	ಮತ್ಸ್ಯಮಹಿಳಾ ಸ್ವಾವಲಂಬನಾ ಯೋಜನೆ	–	–	–	–	0.80	1	–	–	–	–
14	ಸುವರ್ಣ ಭೂಮಿ ಯೋಜನೆ	–	–	–	–	–	–	–	–	1.83	33
15	ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಸಹಾಯ	–	–	–	–	–	–	–	–	4.50	90
16	ರಾಜ್ಯ ವಲಯ ವಿಶೇಷ ಘಟಕ ಯೋಜನೆ ಮೀನು ಕೃಷಿಹೊಳ ನಿರ್ಮಾಣಕ್ಕೆ ಸಹಾಯ	–	–	–	–	–	–	4.16	5	–	–